**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ**

**ಆಳಂದ**

ಸಿ.ಸಿ, ನಂಬರ 8210/2023 ಸಿ.ಡಬ್ಲೂ.10 ಪಿ.ಡಬ್ಲೂ.6

| | |
|---|---|
| ಹೆಸರು | ಸಂತೋಷ |
| ತಂದೆ/ಗಂಡ | ಮಲ್ಕಣ್ಣಾ |
| ವಯಸ್ಸು | 40 ವರ್ಷ |
| ಉದ್ಯೋಗ | ಎಚ್.ಸಿ |
| ವಾಸಸ್ಥಳ | ನರೋಣಾ |

ದಿನಾಂಕ 12-02-2026
ಸತ್ಯ ಪ್ರತಿಜ್ಞೆಯ ಮೇರೆಗೆ

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ವಕೀಲರಿಂದ:**

ನಾನು ಮಾರ್ಚ 2021 ರಿಂದ ಇಲ್ಲಿಯವರೆಗೆ ನರೋಣಾ ಪೋಲಿಸ್ ಠಾಣೆಯಲ್ಲಿ ಎಚ್.ಸಿ ಅಂತಾ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 23-08-2023 ರಂದು ಠಾಣಾಧಿಕಾರಿಯ ಕರ್ತವ್ಯದಲ್ಲಿ ಇದ್ದಾಗ ಚಾಸಾ 1 ರವರು ಠಾಣೆಗೆ ಹಾಜರಾಗಿ ಒಂದು ವರದಿ, ಜಪ್ತಿ ಪಂಚನಾಮೆ, ಆರೋಪಿ ಹಾಜರುಪಡಿಸಿದ ಮೇರೆಗೆ ನಾನು ಸದರಿ ವರದಿಯ ಮೇರೆಗೆ ಠಾಣಾ ಗುನ್ಹಾ ಸಂಖ್ಯೆ 105/2023 ಅಂತಾ ಪ್ರಕರಣವನ್ನು ದಾಖಲಿಸಿಕೊಂಡು ನ್ಯಾಯಾಲಯಕ್ಕೆ ಪ್ರ.ವ.ವ ವರದಿಯನ್ನು ಕಳುಹಿಸಿಕೊಟ್ಟಿರುತ್ತೇನೆ. ಅದೇ ದಿನ ಚಾಸಾ 4 ರಿಂದ 7 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಆರೋಪಿಗೆ 41ಎ ಅಡಿಯಲ್ಲಿ ನೋಟಿಸು ನೀಡಿದ ಬಳಿಕ ಬಿಡುಗಡೆ ಮಾಡಿರುತ್ತೇನೆ. ದಿನಾಂಕ 07-03-2023 ರಂದು ಎಫ್ಎಸ್ಎಲ್‌ಗೆ ಚಾಸಾ 8 ರವರ ಮುಖಾಂತರ ಮು. ಮಾಲನ್ನು ಕಳುಹಿಸಿಕೊಟ್ಟಿರುತ್ತೇನೆ. ದಿಃ 01-10-2023 ರಂದು ಎಫ್ಎಸ್ಎಲ್ ವರದಿಯನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ತನಿಖೆ ಪೂರ್ಣಗೊಂಡ ಕಾರಣ ಆರೋಪಿಯ ವಿರುದ್ದ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ.

ಸಾಕ್ಷಿಯು ಪ್ರ. ವ.ವ.ವರದಿಯಲ್ಲಿ ಇರುವ ಅವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.4, ಸಾಕ್ಷಿಯ ಸಹಿಯನ್ನು ನಿಪಿ. 4 (ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ. 2 ರಲ್ಲಿ ಇರುವ ಅವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 2 (ಬಿ) ಅಂತಾ ಗುರುತಿಸಲಾಯಿತು. ನಿಪಿ. 3 ರಲ್ಲಿ ಇರುವ ಅವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 3 ಬಿ ಅಂತಾ ಗುರುತಿಸಲಾಯಿತು. ದಿಃ 30-09-2023 ರಂದು FSL ರವರು ಕಳುಹಿಸಿದ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 5, ಸಾಕ್ಷಿಯ ಸಹಿಯನ್ನು ನಿಪಿ. 5ಎ ಅಂತಾ ಗುರುತಿಸಲಾಯಿತು. FSL ವರದಿಯನ್ನು ಗುರುತಿಸಲು ಸಮ್ಮತಿ ನೀಡಿದ ಕಾರಣ ಅದನ್ನು ನಿಪಿ. 6 ಅಂತಾ ಗುರುತಿಸಲಾಯತು. ಸಾಕ್ಷಿಯು ಈಗಾಗಲೇ ಗುರುತಿಸಲಾದ ಮು. ಮಾ. 1 ನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿಯು ನ್ಯಾಯಾಲಯದಲ್ಲಿ ಇರುವ ಆರೋಪಿಯನ್ನು ನೋಡಿ ಗುರುತಿಸುತ್ತಾರೆ.

ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎಸ್. ಎ. ಕೆ. ವಕೀಲರಿಂದ:

ನಾನು ನನ್ನ ತನಿಖಾ ಕಾಲದಲ್ಲಿ ಘಟನಾ ಸ್ಥಳಕ್ಕೆ ಭೇಟಿ ನೀಡಿರುವುದಿಲ್ಲ. ನಾನು ನನ್ನ ತನಿಖಾ ಕಾಲದಲ್ಲಿ ಆರೋಪಿಯು ಸದರಿ ಮು.ಮಾಲನ್ನು ಎಲ್ಲಿಂದ ಖರೀದಿ ಮಾಡಿರುತ್ತಾರೆ ಅಂತಾ ವಿಚಾರಣೆ ಮಾಡಿರುವುದಿಲ್ಲ. ನನ್ನ ತನಿಖಾ ಕಾಲದಲ್ಲಿ ಆರೋಪಿಯ ಎಷ್ಟು ರೂಪಾಯಿಗೆ ಎಷ್ಟು ಜನರಿಗೆ ಮದ್ಯವನ್ನು ಮಾರಾಟ ಮಾಡಿರುತ್ತಾನೆ ಅಂತಾ ಕಂಡು ಬಂದಿರುವುದಿಲ್ಲ. ನಾನು ಚಾಸಾ 1 ರವರು ಮತ್ತು ಇತರ ಸಿಬ್ಬಂದಿಯವರು ದಾಳಿ ಮಾಡುವುದಕ್ಕಿಂತ ಮುಂಚೆ ಸಮುಚ್ಚಿತ ವರದಿಯನ್ನು ತಯಾರಿಸಿದ ಬಗ್ಗೆ ಮತ್ತು ನ್ಯಾಯಾಲಯದಿಂದ ಪರವಾನಿಗೆ ಪಡೆದ ಬಗ್ಗೆ ವಿಚಾರಣೆ ಮಾಡಿರುವುದಿಲ್ಲ. ಘಟನಾ ಸ್ಥಳವು ಸಾರ್ವಜನಿಕ ಸ್ಥಳ ಎಂದರೆ ಸರಿ. ನಾನು ಘಟನಾ ಸ್ಥಳದಲ್ಲಿ ಇದ್ದ ಅಕ್ಕಪಕ್ಕದ ಅಂಗಡಿ ಯವರನ್ನು ಮತ್ತು ದೇವಸ್ಥಾನದವರನ್ನು ಆರೋಪಿಯು ಮದ್ಯವನ್ನು ಮಾಡುತ್ತಿದ್ದ ಬಗ್ಗೆ ವಿಚಾರಣೆ ಮಾಡಿರುವುದಿಲ್ಲ. ಚಾಸಾ 1 ರವರು ನನ್ನ ಮೇಲಾಧಿಕಾರಿ ಎಂದರೆ ಸರಿ. ಚಾಸಾ 1 ರವರು ಠಾಣಾ ಅಂಕಿ ಸಂಖ್ಯೆಯನ್ನು ಹೆಚ್ಚಿಸಲು ಸುಳ್ಳು ಪ್ರಕರಣವನ್ನು ಸಲ್ಲಿಸಿದ್ದು ಅವರಿಗೆ ಸಹಾಯ ಮಾಡಬೇಕು ಅಂತಾ ನಾನು ಠಾಣೆಯಲ್ಲಿ ಕುಳಿತು ದಾಖಲೆಗಳನ್ನು ತಯಾರಿಸಿ ನನ್ನ ತನಿಖಾ ಕಾಲದಲ್ಲಿ ಆರೋಪಿಗೂ ಮು.ಮಾಲೀಗೂ ಯಾವುದೇ ರೀತಿಯ ಸಂಬಂಧ ಇಲ್ಲ ಅಂತಾ ಕಂಡು ಬಂದಿದ್ದರೂ ಸಹಿತ ಸುಳ್ಳು ಅಂತಿಮ ವರದಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಿಃ 23-08-2023 ರಂದು ಠಾಣಾಧಿಕಾರಿಯ ಕರ್ತವ್ಯದಲ್ಲಿ ಇದ್ದಾಗ ಚಾಸಾ 1 ರವರು ಠಾಣೆಗೆ ಹಾಜರಾಗಿ ಒಂದು ವರದಿ, ಜಪ್ತಿ ಪಂಚನಾಮೆ, ಆರೋಪಿ ಹಾಜರುಪಡಿಸಿದ ಮೇರೆಗೆ ನಾನು ಸದರಿ ವರದಿಯ ಮೇರೆಗೆ ಠಾಣಾ ಗುನ್ನಾ ಸಂಖ್ಯೆ 105/2023 ಅಂತಾ ಪ್ರಕರಣವನ್ನು ದಾಖಲಿಸಿಕೊಂಡು ನ್ಯಾಯಾಲಯಕ್ಕೆ ಪ್ರ.ವ.ವ ವರದಿಯನ್ನು ಕಳುಹಿಸಿಕೊಟ್ಟಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ದಿನ ಚಾಸಾ 4 ರಿಂದ 7 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ 41ಎ ಅಡಿಯಲ್ಲಿ ನೋಟಿಸು ನೀಡಿದ ಬಳಿಕ ಬಿಡುಗಡೆ ಮಾಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 07-03-2023 ರಂದು ಎಫ್‌ಎಸ್‌ಎಲ್‌ಗೆ ಚಾಸಾ 8 ರವರ ಮುಖಾಂತರ ಮು. ಮಾಲನ್ನು ಕಳುಹಿಸಿಕೊಟ್ಟಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 01-10-2023 ರಂದು ಎಫ್ ಎಸ್‌ಎಲ್ ವರದಿಯನ್ನು ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ದಿನ ತನಿಖೆ ಪೂರ್ಣಗೊಂಡ ಕಾರಣ ಆರೋಪಿಯ ವಿರುದ್ದ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇರುವುದಿಲ್ಲಃ</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಸಾ.ಓ.ಹೇ.ಕೇ.ಸ.ಇ.ಅದೆ.

**ಸಿ.ಸಿ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ.ಎಫ್.ಸಿ ಆಳಂದ**